ದಿನಾಂಕಃ **23.11.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು **2**ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಆರ್.ವಿ ರವರಿಂದಃ

**REMCO, BHEL House building Co-operative society** ನಲ್ಲಿ **1994**ನೇ ಇಸವಿಯಿಂದ ನಿರ್ದೇಶಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಸಾಕ್ಷಿಯು ಮುಂದುವರೆದ ಪ್ರಸ್ತುತ ಸದರಿ ಸೊಸೈಟಿಯಲ್ಲಿ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸುತ್ತಿದೆದೇನೆ ಎಂದು ನುಡಿಯುತ್ತಾರೆ. ನಾನು **2015** ನೇ ಇಸವಿಯಿಂದ ಅಧ್ಯಕ್ಷನಾಗಿ ನಿರ್ವಹಿಸುತ್ತಿದ್ದೇನೆ. ಸದರಿ ಸೊಸೈಟಿಗೆ ಅಧ್ಯಕ್ಷನಾಗುವ ಪೂರ್ವದಲ್ಲಿ ಸೊಸೈಟಿಯ ನಿರ್ದೇಶಕನು ಆಗಿದ್ದೆ. ಸದರಿ ಸೊಸೈಟಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳು ನನಗೆ ಇರುತ್ತದೆ. ಸೊಸೈಟಿಗೆ ಬೈಲಾ ಇರುತ್ತದೆ. ಸದರಿ ಬೈಲಾ ಹಾಜರು ಪಡಿಸುವ ಅವಶ್ಯಕತೆ ಇರುವುದಿಲ್ಲ. ಬೈಲಾ ನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸದರಿ ಬೈಲಾದಲ್ಲಿ ಅಡಕಗೊಂಡಿರುವ ಎಲ್ಲಾ ನಿಬಂಧಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸೊಸೈಟಿ ಬೈಲಾ ಪ್ರಕಾರ ಯಾವುದೇ ಸೊಸೈಟಿಯು ವ್ಯವಸಾಯ ಭೂಮಿಯನ್ನು ಖರೀದಿಸುವ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ಅಧಿಕಾರ ಇರುವುದಿಲ್ಲ ಆದರೆ ವ್ಯವಸಾಯ ಭೂಮಿಯನ್ನು ಕರಾರು ಮತ್ತು ಜಿಪಿಎ ಮಾಡಿಕೊಳ್ಳಲು ಅಧಿಕಾರ ಇರುತ್ತದೆ ಎಂದು ನುಡಿಯುತ್ತಾರೆ.

ಪ್ರಶ್ನೆಃ ವ್ಯವಸಾಯ ಭೂಮಿಯನ್ನು ಸೊಸೈಟಿ ಪರವಾಗಿ ಖರೀದಿಸಲು ನೀವು ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ಅನುಮತಿ ಏನಾದರು ಸರ್ಕಾರದಿಂದ ಪಡೆದುಕೊಂಡಿರುತೀರಾ**?**

ಉಃ ಹೌದು ಪಡೆದುಕೊಂಡಿರುತ್ತೇನೆ.

ಯಾವ ಯಾವ ಸರ್ವೆ ನಂಬರ್ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳಬೇಕು ಎಂದು ಸರ್ಕಾರಕ್ಕೆ ನಾನು ಮನವಿ ಪತ್ರ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತು. ಸದರಿ ಮನವಿಯನ್ನು ಸರ್ಕಾರಕ್ಕೆ ನಾನು ಸುಮಾರು **1986** ನೇ ಇಸವಿಯಲ್ಲಿ ಸೊಸೈಟಿ ಪರವಾಗಿ ಸಲ್ಲಿಸಿರುತ್ತೇನೆ. ಸದರಿ ಮನವಿ ಮೆರೆಗೆ ರಾಜ್ಯ ಸರ್ಕಾರವು **1991** ನೇ ಇಸವಿಯಲ್ಲಿ ಅಂತಿಮ ಭೂ ಸ್ವಾಧೀನ ಪ್ರಕ್ರಿಯೇ ಹೊರಡಿಸಿರುತ್ತದೆ. ಸಾಕ್ಷಿಗೆ ದಿಃ**05.10.1987** ರ ಕರ್ನಾಟಕ ರಾಜ್ಯ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಸದರಿ ರಾಜ್ಯ ಪತ್ರವೆ ಭೂ ಸ್ವಾಧೀನ ಪ್ರಕ್ರಿಯೇ ಅಂತಿಮ ಪತ್ರವಾಗಿರುತ್ತದೆ ಎಂದು ನೋಡಿ ಗುರುತಿಸಿದ ಮೆರೆಗೆ ಅದನ್ನು ನಿಡಿ**-5** ಎಂದು ಗುರುತಿಸಲಾಯಿತು. ನಿಡಿ**-5** ರಾಜ್ಯ ಪತ್ರ ವನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕೆಲವು ಭೂ ಮಾಲೀಕರು ಪ್ರಶ್ನಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ ಕೇವಲ ಮೂರು ಜನ ಮಾತ್ರ ನಿಡಿ**-5** ನ್ನು ಪ್ರಶ್ನಿಸಿದ್ದು, ಇನ್ನು ಉಳಿಕೆ ಭೂ ಮಾಲೀಕರು ಭೂ ಸ್ವಾಧೀನಕ್ಕೆ ಅನುಮತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ**-5** ರಾಜ್ಯ ಪತ್ರವನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯು ಉಚ್ಚ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ

ರಿಟ್ ಅರ್ಜಿಯಲ್ಲಿ ಹೊರ ಬಂದ ತೀರ್ಪನ್ನು ಪ್ರಶ್ನಿಸಿ ನಾನು ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದೆ ಎಂದರೆ ಸರಿ. ಸದರಿ ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತದೆ ಎಂದರೆ ಸರಿ. ಸರ್ವೋಚ್ಚ ನ್ಯಾಯಾಲಯವು ತನ್ನ ಆಜ್ಞೆಯಲ್ಲಿ ನಿಡಿ-**5** ರಾಜ್ಯ ಪತ್ರದಂತೆ ಭೂ ಸ್ವಾಧೀನ ಪಡಿಸಿಕೊಂಡಿರುವ ಎಲ್ಲಾ ಭೂಮಿಗಳಿಗೆ ಮತ್ತು ಭೂ ಮಾಲೀಕರಿಗೆ ಆಜ್ಞೆಯು ಅನ್ವಹಿಸುತ್ತದೆ ಎಂದು ಹೇಳಿರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.